**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**13.06.2025 / 7.35 am**

<><*<><>*><>

ಮುಖ್ಯಾಂಶಗಳು

೧. ಏರ್ ಇಂಡಿಯಾ ವಿಮಾನ ದುರಂತ: ಅಧಿಕೃತ ತನಿಖೆ ಆರಂಭಿಸಿದ ವಿಮಾನ ಅಪಘಾತ ತನಿಖಾ ಬ್ಯೂರೋ

೨. ವಿಮಾನ ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳಿಗೆ ತಲಾ ಒಂದು ಕೋಟಿ ರೂಪಾಯಿ ಪರಿಹಾರವನ್ನು ಘೋಷಿಸಿದ ಟಾಟಾ ಸಮೂಹ

೩. ನಿಷ್ಕ್ರಿಯ ಬ್ಯಾಂಕ್ ಖಾತೆಗಳ ಪುನರ್‌ಸಕ್ರಿಯಕ್ಕೆ ಕೆವೈಸಿ ನವೀಕರಣ ಸೌಲಭ್ಯ ಒದಗಿಸಲು ಬ್ಯಾಂಕುಗಳಿಗೆ ಆರ್‌ಬಿಐ ನಿರ್ದೇಶನ

೪. ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಭಾರಿ ಮಳೆ: ಇದೇ ೧೮ರವರೆಗೆ ರೆಡ್ ಅಲರ್ಟ್ ಘೋಷಣೆ

೫. ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್: ೫೦ ಮೀಟರ್ ರೈಫಲ್‌ನಲ್ಲಿ ಭಾರತದ ಸಿಫ್ಟ್ ಕೌರ್ ಸಮ್ರಾಗೆ ಕಂಚಿನ ಪದಕ

><><><><><><><><

ಅಹಮದಾಬಾದ್‌ನಲ್ಲಿ ನಿನ್ನೆ ಸಂಭವಿಸಿದ ಏರ್ ಇಂಡಿಯಾ ವಿಮಾನ ಅಪಘಾತಕ್ಕೆ ಸಂಬಂಧಿಸಿದಂತೆ ವಿಮಾನ ಅಪಘಾತ ತನಿಖಾ ಬ್ಯೂರೋ - ಎಎಐಬಿ ಅಧಿಕೃತ ತನಿಖೆ ಆರಂಭಿಸಿದೆ. ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು ಮಾತನಾಡಿ, ಈ ತನಿಖೆ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ ಐಸಿಎಒ ನ ಮೌಲ್ಯಮಾಪನಾ ಮಾರ್ಗಸೂಚಿಗೆ ಅನುಗುಣವಾಗಿ ನಡೆಯಲಿದೆ ಎಂದು ತಿಳಿಸಿದ್ದಾರೆ. ಈ ಪ್ರಕರಣವನ್ನು ಸಮಗ್ರವಾಗಿ ಪರಿಶೀಲಿಸಲು ಅನೇಕ ಕ್ಷೇತ್ರಗಳ ಪರಿಣಿತರನ್ನು ಒಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ಸರ್ಕಾರ ರಚಿಸಿದೆ. ಈ ಸಮಿತಿ ಭವಿಷ್ಯದಲ್ಲಿ ಇಂತಹ ಘಟನೆಗಳು ಸಂಭವಿಸದಂತೆ ವಿಮಾನಯಾನ ಸುರಕ್ಷತೆಯನ್ನು ಬಲಪಡಿಸುವ

ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ. ಏರ್ ಇಂಡಿಯಾ ಪ್ರಕಟಣೆಯ ಪ್ರಕಾರ, ಲಂಡನ್‌ಗೆ ತೆರಳುತ್ತಿದ್ದ ವಿಮಾನದಲ್ಲಿದ್ದ ೨೪೧ ಜನರು ಮೃತಪಟ್ಟಿದ್ದಾರೆ. ಅಪಘಾತ ಸಂಭವಿಸಿದ ಸಮಯದಲ್ಲಿ ಬೋಯಿಂಗ್ ೭೮೭-೮ ಡ್ರೀಮ್‌ಲೈನರ್‌ನಲ್ಲಿ ೨೪೨ ಪ್ರಯಾಣಿಕರು ಮತ್ತು ಸಿಬ್ಬಂದಿಯವರು ಇದ್ದರು. ಪ್ರಯಾಣಿಕರಲ್ಲಿ ೧೬೯ ಭಾರತೀಯರು, ೫೩ ಬ್ರಿಟಿಷ್ ನಾಗರಿಕರು, ಏಳು ಪೋರ್ಚುಗೀಸ್ ನಾಗರಿಕರು ಮತ್ತು ಒಬ್ಬ ಕೆನಡಾ ನಾಗರಿಕರು ಸೇರಿದ್ದರು. ಇದರ ಜೊತೆಗೆ ಈ ಅಪಘಾತ ಸಂಭವಿಸಿದ ಸ್ಥಳದಲ್ಲಿದ್ದ ಹಲವರು ಸಹ ಮೃತಪಟ್ಟಿದ್ದಾರೆ. ಗುಜರಾತ್ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ನಾಯಕ ವಿಜಯ್ ರೂಪಾನಿ ಮೃತರಾಗಿರುವವರಲ್ಲಿ ಒಬ್ಬರಾಗಿದ್ದಾರೆ. ವಿಶ್ವಾಸ್ ಕುಮಾರ್ ರಮೇಶ್ ಎಂಬ ಪ್ರಯಾಣಿಕನೊಬ್ಬ ಈ ಭೀಕರ ದುರಂತದಲ್ಲಿ ಬದುಕುಳಿದಿದ್ದಾರೆ. ವಿಮಾನ ಟೇಕ್‌ಒಫ್ ಆದ ಕೆಲವೇ ಕ್ಷಣಗಳಲ್ಲಿ, ಮಧ್ಯಾಹ್ನ ೧.೩೯ಕ್ಕೆ ಪೈಲಟ್ "ಮೇಡೇ" ಎಂದು ತುರ್ತು ಕರೆ ನೀಡಿದ್ದರು. ಈ ವಿಮಾನವನ್ನು ಕ್ಯಾಪ್ಟನ್ ಸುಮೀತ್ ಸಬರ್ವಾಲ್ ಹಾಗೂ ಫಸ್ಟ್ ಆಫೀಸರ್ ಕ್ಲೈವ್ ಕುಂದರ್ ನಡೆಸುತ್ತಿದ್ದರು. ಸಬರ್ವಾಲ್ ಅವರಿಗೆ ೮ ಸಾವಿರದ ೨೦೦ ಗಂಟೆಗಳ ಹಾರಾಟದ ಅನುಭವವಿದ್ದು, ಕುಂದರ್ ಅವರಿಗೆ ೧ ಸಾವಿರದ ೧೦೦ ಗಂಟೆಗಳಷ್ಟು ಹಾರಾಟದ ಅನುಭವವಿತ್ತು. ವಿಮಾನ ತಯಾರಕರಾದ ಬೋಯಿಂಗ್ ಕಂಪನಿ, ಏರ್ ಇಂಡಿಯಾ ಜೊತೆಗೆ ಸಂಪರ್ಕದಲ್ಲಿದ್ದು, ಎಲ್ಲಾ ಅಗತ್ಯ ಬೆಂಬಲ ನೀಡಲು ಸಿದ್ಧವಿದೆ ಎಂದು ತಿಳಿಸಿದೆ. ಈ ದುರ್ಘಟನೆಯ ನಂತರ ಬೋಯಿಂಗ್ ಷೇರುಗಳು ಶೇಕಡ ೪ ಕ್ಕಿಂತ ಹೆಚ್ಚು ಕುಸಿತ ಕಂಡಿವೆ. ಟಾಟಾ ಸಮೂಹದ ಅಧ್ಯಕ್ಷ ಎನ್. ಚಂದ್ರಶೇಖರನ್, ಈ ಭೀಕರ ಅಪಘಾತದಲ್ಲಿ ಮೃತಪಟ್ಟ ಪ್ರತಿಯೊಬ್ಬರ ಕುಟುಂಬಕ್ಕೆ ತಲಾ ಒಂದು ಕೋಟಿ ರೂಪಾಯಿಗಳ ಪರಿಹಾರವನ್ನು ಘೋಷಿಸಿದ್ದಾರೆ. ಗಾಯಗೊಂಡವರ ವೈದ್ಯಕೀಯ ವೆಚ್ಚವನ್ನು ಟಾಟಾ ಗ್ರೂಪ್ ಸಂಪೂರ್ಣವಾಗಿ ಭರಿಸಲಿದೆ ಮತ್ತು ಸಂಪೂರ್ಣ ಚಿಕಿತ್ಸಾ ನೆರವು ನೀಡುವುದಾಗಿ ತಿಳಿಸಿದ್ದಾರೆ. ಜೊತೆಗೆ ಬಿಜೆ ಮೆಡಿಕಲ್ ಕಾಲೇಜಿನಲ್ಲಿ ಹೊಸ ವಿದ್ಯಾರ್ಥಿ ವಸತಿ ಗೃಹ ನಿರ್ಮಾಣಕ್ಕೆ ಸಹಾಯ ಮಾಡುವುದಾಗಿ ಹೇಳಿದ್ದಾರೆ. ಅಪಘಾತದ ಕೆಲವೇ ಗಂಟೆಗಳೊಳಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಹಮದಾಬಾದ್ ಭೇಟಿ ನೀಡಿದರು. ನಾಗರಿಕ ವಿಮಾನಯಾನ ಸಚಿವ ರಾಮ್ ಮೋಹನ್ ನಾಯ್ಡು, ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಅವರು ಪರಿಹಾರ ಮತ್ತು ರಕ್ಷಣಾ ಕಾರ್ಯಗಳ ಪರಿಶೀಲನೆ ನಡೆಸಿದರು. ಬಳಿಕ ಮಾಧ್ಯಮದೊಂದಿಗೆ ಮಾತನಾಡಿದ ಅವರು, ಈ ದುರ್ಘಟನೆ ಇಡೀ ದೇಶವನ್ನು ಆಘಾತಕ್ಕೆ ಒಳಗಾಗಿಸಿದೆ. ಈ ಸಂಕಷ್ಟದ ಸಮಯದಲ್ಲಿ ಎಲ್ಲಾ ಭಾರತೀಯರು ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳ ಜೊತೆ ನಿಂತಿದ್ದಾರೆ

ಎಂದರು. ನಾಗರಿಕ ವಿಮಾನಯಾನ ಸಚಿವಾಲಯ ತ್ವರಿತವಾಗಿ ಈ ಘಟನೆಗೆ ಕಾರಣ ಪತ್ತೆ ಹಚ್ಚಲು ಅಧಿಕೃತ ತನಿಖೆಯನ್ನು ಆರಂಭಿಸಿದೆ ಎಂದು ತಿಳಿಸಿದ್ದಾರೆ. ಗೃಹ ಸಚಿವರು, ಗಾಯಗೊಂಡ ಹಲವು ಸಂತ್ರಸ್ತರು ದಾಖಲಾಗಿರುವ ಅಹಮದಾಬಾದ್ ಸಿವಿಲ್ ಆಸ್ಪತ್ರೆಯ ಆಘಾತ ಚಿಕಿತ್ಸಾ ಕೇಂದ್ರಕ್ಕೆ ಭೇಟಿ ನೀಡಿದರು.

><><><><><><><><

ಧ್ವನಿ : ಅಮಿತ್ ಶಾ (೨೦ ಸೆಕೆಂಡ್ )

><><><><><><><><

ಏರ್ ಇಂಡಿಯಾ ದುರಂತ ಬೆನ್ನಲ್ಲೆ, ಪ್ರಯಾಣಿಕರ ಹತ್ತಿರದ ಸಂಬಂಧಿಕರು ಮತ್ತು ಏರ್ ಇಂಡಿಯಾ ಸಿಬ್ಬಂದಿಗಳನ್ನು ನಿರ್ವಹಿಸಲು ಏರ್ ಇಂಡಿಯಾ ದೆಹಲಿ ಮತ್ತು ಮುಂಬೈನಿಂದ ತಲಾ ಒಂದು ವಿಮಾನ ಸೇವೆಯನ್ನು ಅಹಮದಾಬಾದ್‌ಗೆ ಒದಗಿಸಿದೆ. ದೆಹಲಿ ಮತ್ತು ಮುಂಬೈನಲ್ಲಿರುವ ಪ್ರಯಾಣಿಕರು ಮತ್ತು ಸಿಬ್ಬಂದಿಯ ಹತ್ತಿರದ ಸಂಬಂಧಿಕರು ಈ ವಿಮಾನಗಳಲ್ಲಿ ಪ್ರಯಾಣಿಸಲು ಬಯಸುವವರು ಹಾಟ್‌ಲೈನ್ ನಂಬರ್ ೧೮೦೦ ೫೬೯೧ ೪೪೪ ಗೆ ಕರೆ ಮಾಡಬಹುದು ಎಂದು ಏರ್ ಇಂಡಿಯಾ ತಿಳಿಸಿದೆ. ಹೆಚ್ಚುವರಿಯಾಗಿ, ಅಂತರರಾಷ್ಟ್ರೀಯ ಸ್ಥಳಗಳಿಂದ ಬರುವ ಮತ್ತು ಪ್ರಯಾಣಿಸಲು ಬಯಸುವವರು ಹಾಟ್‌ಲೈನ್ ಸಂಖ್ಯೆ +೯೧ ೮೦೬೨೭೭೯೨೦೦ ಗೆ ಕರೆ ಮಾಡಬಹುದು.

><><><><><><><><

ಏರ್ ಇಂಡಿಯಾ ವಿಮಾನ ಅಪಘಾತದ ಬೆಳವಣಿಗೆಗಳನ್ನು ಅಮೆರಿಕ ಮೇಲ್ವಿಚಾರಣೆ ಮಾಡುತ್ತಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ. ಸಾಮಾಜಿನಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು, ದುರಂತದ ನಂತರದ ಬೆಳವಣಿಗೆಗಳನ್ನು ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸಲಾಗಿದೆ ಅಗತ್ಯವಿರುವವರಿಗೆ  ಸಹಾಯ ಮಾಡುತ್ತಿರುವ ತುರ್ತು ಪ್ರತಿಕ್ರಿಯೆ ತಂಡದೊಂದಿಗೆ ತಾವು ನಿಲ್ಲುವುದಾಗಿ ತಿಳಿಸಿದ್ದಾರೆ. ಈ ನಡುವೆ  ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ತನ್ನ ಹೇಳಿಕೆಯಲ್ಲಿ, "ಅಪಘಾತಕ್ಕೆ ಸಂಬಂಧಿಸಿದಂತೆ  ಅಮೆರಿಕ ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿ ಎನ್‌ಟಿಎಸ್‌ಬಿ ಸಮನ್ವಯದೊಂದಿಗೆ ತಂಡವನ್ನು ರಚಿಸಲು ಸಿದ್ಧವಿರುವುದಾಗಿ ತಿಳಿಸಿದೆ.

><><><><><><><><

ನಿಷ್ಕ್ರಿಯ ಬ್ಯಾಂಕ್ ಖಾತೆಗಳು ಮತ್ತು ಠೇವಣಿಗಳನ್ನು ಪುನರ್‌ಸಕ್ರಿಯಗೊಳಿಸಲು, ಎಲ್ಲಾ ಶಾಖೆಗಳಲ್ಲಿ, ಕೆವೈಸಿ ನವೀಕರಣ ಸೌಲಭ್ಯವನ್ನು ಬ್ಯಾಂಕುಗಳು ಒದಗಿಸಬೇಕು ಎಂದು ಭಾರತೀಯ ರಿಸರ್ವ್ ಬ್ಯಾಂಕ್ - ಆರ್‌ಬಿಐ ದೇಶದ ಎಲ್ಲಾ ಬ್ಯಾಂಕುಗಳಿಗೆ ನಿರ್ದೇಶಿಸಿದೆ. ಈ ಕುರಿತು ಪತ್ರಿಕಾ ಪ್ರಕಟನೆಯಲ್ಲಿ ಆರ್‌ಬಿಐ, ಈ ರೀತಿಯ ಖಾತೆಗಳ ಮತ್ತು ಠೇವಣಿಗಳಿಗಾಗಿ ವೀಡಿಯೋ-ಗ್ರಾಹಕ ಗುರುತಿಸುವ ಪ್ರಕ್ರಿಯೆ ಮೂಲಕ ಕೆವೈಸಿ ನವೀಕರಣ ಸೌಲಭ್ಯ ಒದಗಿಸಲು ಪ್ರಯತ್ನಿಸಬೇಕು. ಅದರ ಜೊತೆಗೆ, ಇಂತಹ ನಿಷ್ಕ್ರಿಯ ಖಾತೆಗಳನ್ನು ಪುನರ್‌ಸಕ್ರಿಯಗೊಳಿಸುವ ಸಲುವಾಗಿ ಬ್ಯಾಂಕುಗಳು ಅಧಿಕೃತ ವ್ಯಾಪಾರ ಪ್ರತಿನಿಧಿಗಳ ಸೇವೆಯನ್ನು ಬಳಸಿಕೊಳ್ಳಬೇಕು ಎಂದು ಸೂಚಿಸಿದೆ. ಈ ಕ್ರಮದ ಮೂಲಕ ಗ್ರಾಹಕರು ತಮ್ಮ ಖಾತೆಗಳನ್ನು ಸುಲಭವಾಗಿ ಪುನರ್‌ಸಕ್ರಿಯಗೊಳಿಸಬಹುದಾಗಿದೆ ಮತ್ತು ಬ್ಯಾಂಕುಗಳಲ್ಲಿ ಹಣದ ಸುಸ್ಥಿರ ವಹಿವಾಟು ಸಾಧ್ಯವಾಗಲಿದೆ.

><><><><><><><><

ಮುಂದಿನ ಮೂರು ದಿನಗಳಲ್ಲಿ ಕರ್ನಾಟಕ, ಕೇರಳ, ಮಾಹೆ, ತಮಿಳುನಾಡು, ಪುದುಚೇರಿ, ಕಾರೈಕಲ್, ಕೊಂಕಣ, ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ  ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ರಾಜ್ಯಗಳ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಗಾಳಿಯು ಗಂಟೆಗೆ ೬೦ ರಿಂದ ೭೦ ಕಿಲೋಮೀಟರ್ ವೇಗದಲ್ಲಿ ಬೀಸಲಿದೆ. ಈಶಾನ್ಯ ರಾಜ್ಯಗಳಲ್ಲಿ ಮುಂದಿನ ಎರಡು ಮೂರು ದಿನಗಳವರೆಗೆ ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ. ಈ ನಡುವೆ, ದೆಹಲಿ, ಪಂಜಾಬ್, ಹರಿಯಾಣ, ಚಂಡೀಗಢ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಸಿಲಿನ ತಾಪಮಾನ  ಮುಂದುವರಿಯುವ ಸಾಧ್ಯತೆಯಿದೆ. ಮುಂದಿನ ೨೪ ಗಂಟೆಗಳಲ್ಲಿ ದೆಹಲಿ, ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದ ಪ್ರತ್ಯೇಕ ಸ್ಥಳಗಳಲ್ಲಿ ರಾತ್ರಿಯ ವೇಳೆ ಉಷ್ಣ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ನಡುವೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಭಾರಿ ಮಳೆಯ ಆರ್ಭಟ ಮುಂದುವರಿದಿದ್ದು, ಜನಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಕರಾವಳಿ ಪ್ರದೇಶಗಳ ಜೊತೆಗೆ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಹಾಗೂ ದಾವಣಗೆರೆ ಎಂಬ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿಯೂ ಭಾರಿ ಮಯಾಗುತ್ತಿದೆ. ಹವಾಮಾನ ಇಲಾಖೆ ಈ ಹಿನ್ನೆಲೆಯಲ್ಲಿ, ಈ ಜಿಲ್ಲೆಗಳಿಗೆ ಇದೇ ೧೮ರವರೆಗೆ ರೆಡ್ ಮತ್ತು ಆರೆಂಜ್

ಅಲರ್ಟ್ ಘೋಷಿಸಿದೆ. ಮಳೆಯ ತೀವ್ರತೆಗೆ ಅನುಗುಣವಾಗಿ ಈ ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ, ನಾಗರಿಕರು ಎಚ್ಚರಿಕೆಯಿಂದ ಇರಬೇಕು ಎಂಬ ಸೂಚನೆ ನೀಡಲಾಗಿದೆ.

><><><><><><><

ಜರ್ಮನಿಯ ಮ್ಯುನಿಚ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ೨೦೨೫ರಲ್ಲಿ ಮಹಿಳೆಯರ ೫೦ ಮೀಟರ್ ರೈಫಲ್ ಥ್ರೀ ಪೊಸಿಷನ್ ಸ್ಪರ್ಧೆಯಲ್ಲಿ ಭಾರತದ ಶೂಟರ್ ಸಿಫ್ಟ್ ಕೌರ್ ಸಮ್ರಾ ಕಂಚು ಪದಕ ಗೆದ್ದಿದ್ದಾರೆ. ಸಿಫ್ಟ್ ಅವರು ಫೈನಲ್‌ನಲ್ಲಿ ೪೫೩.೧ ಅಂಕಗಳು ಗಳಿಸಿ ಮೂರನೇ ಸ್ಥಾನವನ್ನು ಪಡೆದುಕೊಂಡರು. ನಾರ್ವೆಯ ಜೀನೆಟ್ ಹೆಗ್ ಡೂಸ್ಟಾಡ್ ಅವರು ೪೬೬.೯ ಅಂಕಗಳೊಂದಿಗೆ ಚಿನ್ನದ ಪದಕ, ಹಾಗೂ ಸ್ವಿಟ್ಜರ್‌ಲ್ಯಾಂಡ್‌ನ ಎಮಿಲಿ ಜ್ಯಾಗ್ಗಿ ಅವರು ೪೬೪.೮ ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದಿದ್ದಾರೆ. ಈ ಸಾಧನೆಯೊಂದಿಗೆ ಮುನಿಕ್ ವಿಶ್ವಕಪ್‌ನಲ್ಲಿ ಭಾರತದ ಎರಡನೇ ಪದಕ ಖಚಿತವಾಗಿದೆ. ಇದಕ್ಕೂ ಮೊದಲು, ಎಲ ವೆನಿಲ್ ವಲ ರಿವನ್ ಮಹಿಳೆಯರ ೧೦ ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಕಂಚು ಪದಕ ಗೆದ್ದಿದ್ದರು. ಈ ಮೂರನೇ ಹಂತದ ವಿಶ್ವಕಪ್ ಟೂರ್ನಿಯಲ್ಲಿ ೭೮ ರಾಷ್ಟ್ರಗಳಿಂದ ಸುಮಾರು ೭೦೦ ಶೂಟರ್‌ಗಳು ಪಾಲ್ಗೊಂಡಿದ್ದು, ತೀವ್ರ ಪೈಪೋಟಿ ಏರ್ಪಟ್ಟಿದೆ.

><><><><><><><